

ಭಾರತದ ಧಾರ್ಮಿಕ ಪರಂಪರೆಯಲ್ಲಿ ಆರ್ಯಸಮಾಜ ಒಂದು ಅಪೂರ್ವ ವಿದ್ಯಮಾನ. ಧರ್ಮದ ಮೂಲ ಆಶಯಗಳನ್ನು ಒಪ್ಪಿಕೊಂಡು, ಧರ್ಮದ ಭಾಗವಾಗಿದ್ದುಕೊಂಡೇ ಅದರ ಹುಳುಕುಗಳನ್ನು ಸರಿಪಡಿಸುವ ಉದ್ದೇಶದಿಂದ ರೂಪುಗೊಂಡ ಆರ್ಯಸಮಾಜ, ಜಾತಿ ಹಾಗೂ ಭೀತಿಯನ್ನು ನಿವಾರಿಸುವ ಧ್ಯೇಯವನ್ನು ಹೊಂದಿದೆ. ಕೇವಲ ನೂರು ಸದಸ್ಯರೊಂದಿಗೆ ಆರಂಭವಾದ ಈ ಸಮಾಜ ಪ್ರಸ್ತುತ ದೇಶ–ವಿದೇಶಗಳಲ್ಲಿ ತನ್ನ ಕವಲುಗಳನ್ನು ಹೊಂದಿದೆ. ‘ಆರ್ಯಸಮಾಜ’ದ ಸರಳ ಹಾಗೂ ಅರ್ಥಪೂರ್ಣ ವಿವಾಹದ ಪರಿಕಲ್ಪನೆ ಮದುವೆಯ ಘನತೆಯನ್ನು ಹೆಚ್ಚಿಸುವಂತಿದೆ ಹಾಗೂ ಈ ಕಾಲಕ್ಕೆ ಅಗತ್ಯವಾದ ಮಾದರಿಯಾಗಿದೆ. ಸ್ವಾಮಿ ದಯಾನಂದ ಸರಸ್ವತಿ ಅವರ ಬದುಕಿನ ಸಿದ್ಧಿಯ ರೂಪದಲ್ಲಿ ಈಗಲೂ ಸಕ್ರಿಯವಾಗಿರುವ ‘ಆರ್ಯಸಮಾಜ‘ಕ್ಕೆ ಏಪ್ರಿಲ್ 10ರಂದು 145 ವರ್ಷಗಳು ತುಂಬಲಿವೆ (ಸ್ಥಾಪನೆ: 1875). ದಲಿತರು, ಸ್ತ್ರೀಯರು ಸೇರಿದಂತೆ ಎಲ್ಲ ಜಾತಿ–ವರ್ಗದ ಜನರಿಗೆ ಬಾಗಿಲು ತೆರೆದಿರುವ ‘ಆರ್ಯಸಮಾಜ’ದ ‘ಜ್ಞಾನ–ಕರ್ಮ–ಉಪಾಸನೆ’ ಎನ್ನುವ ಮೂಲ ಆಶಯ ನಾನಾ ಕಾರಣಗಳಿಂದ ಜರ್ಝರಿತವಾಗಿರುವ ಈ ಹೊತ್ತಿಗೆ ಅತ್ಯಂತ ಅಗತ್ಯವಾದುದು.

■ ನೇಮಿಚಂದ್ರ